# 'ಕಾಂಟಿನೆಂಟಲ್ ಫುಡ್ ತುಂಬ ಇಷ್ಟ'



ಜರ್ಮನಿ ಮೂಲದ ಯಶಸ್ವಿ ಉದ್ಯಮಿ ರೊನ್ನಾ ಕ್ವಾಜಿ

ಅಭಿವೃದ್ಧಿ ಹೊಂದಿದ ದೇಶಗಳಾದ ಸಿಂಗಾಪುರ, ಸ್ವಿಝರ್ಲಂಡ್, ಜರ್ಮನಿಗಳಿಂದ ಬೆಂಗಳೂರಿಗೆ ಬಂದ ಅನೇಕರು ಇಲ್ಲಿ ನೆಲೆಯೂರುವುದು ಸ್ವಂತ ಉದ್ಯಮ ಆರಂಭಿಸುವ ಕಾರಣಕ್ಕಾಗಿಯೇ. ಸಾಫ್ಟ್‌ವೇರ್ ಎಂಜಿನಿಯರ್ ಇರಲಿ, ಇತರ ಔದ್ಯೋಗಿಕ ಕ್ಷೇತ್ರವೇ ಇರಲಿ, ಬೆಂಗಳೂರು ಸೂಕ್ತವಾದ ತಾಣ ಎಂಬುದು ವಿದೇಶೀಯರಿಗೆ ಚೆನ್ನಾಗಿ ಗೊತ್ತು. ಇಲ್ಲಿ ಬ್ಯುಸಿನೆಸ್ ಆರಂಭಿಸಿದರೆ ಲಾಭ ಗಳಿಸಲು ಯಾವುದೇ ತೊಂದರೆಯಿಲ್ಲ ಎಂಬುದನ್ನು ಅರಿತ ವಿದೇಶೀಯರು ಹೋಟೆಲ್‌ನಿಂದ ಹಿಡಿದು ತಾಂತ್ರಿಕ ಕ್ಷೇತ್ರಗಳವರೆಗೆ ತಮ್ಮ ಉದ್ಯಮದ ಹರವನ್ನು ವಿಸ್ತರಿಸಿದ್ದಾರೆ. ಜರ್ಮನಿಯಿಂದ ಬೆಂಗಳೂರಿಗೆ ಸುಮಾರು 10 ವರ್ಷಗಳ ಹಿಂದೆ ಬಂದ ರೊನ್ನಾ ಕ್ವಾಜ್ ಅವರು ಕೂಡ ಹೋಟೆಲ್ ಕಂ ರೆಸಾರ್ಟ್ ಮತ್ತು ಟ್ರಾವೆಲ್ ಏಜೆನ್ಸಿ ಎರಡನ್ನೂ ನಿಭಾಯಿಸುತ್ತಿದ್ದಾರೆ.

'ನಾನು 1991ರಲ್ಲಿ ಚೆನ್ನೈಗೆ ಬಂದೆ. ಅಲ್ಲಿ ಸೂರ್ಯ ಟ್ರಾವೆಲ್ ಏಜೆನ್ಸಿ ಆರಂಭಿಸಿದೆ. 2003ರಲ್ಲಿ ಬೆಂಗಳೂರಿಗೆ ಬಂದು ಅದೇ ಏಜೆನ್ಸಿಯ ಶಾಖೆ ತೆರೆದೆ. ಅಲ್ಲದೆ ಬೆಂಗಳೂರಿನಲ್ಲಿಯೇ ಈಗಲ್ ರಿಡ್ಜ್ ಎಂಬ ರೆಸಾರ್ಟ್ ಅನ್ನು 2006ರಲ್ಲಿ ಆರಂಭಿಸಿದೆ. ಹೋಟೆಲ್ ಬುಕಿಂಗ್, ರೆಸಾರ್ಟ್ ಮ್ಯಾನೇಜ್‌ಮೆಂಟ್‌ನಲ್ಲಿ ಬ್ಯುಸಿಯಾಗಿದ್ದೇನೆ. ಹೊಸ ವರ್ಷ ಸಮೀಪಿಸುತ್ತಿರುವುದರಿಂದ ಹೊಸ ವರ್ಷಾಚರಣೆಗೆ ರೆಸಾರ್ಟ್‌ಗೆ ಬರುವವರ ಸಂಖ್ಯೆ ಹೆಚ್ಚು. ಹೀಗಾಗಿ ಬಿಡುವಿಲ್ಲದ ಕೆಲಸ' ಎನ್ನುತ್ತಾರೆ ರೊನ್ನಾ.

ರೊನ್ನಾ ಮೂಲತಃ ಜರ್ಮನಿಯವರು. ಆದರೂ ಭಾರತಕ್ಕೆ ಬರುವುದಕ್ಕೆ ಮೊದಲು ಬೇರೆ ಬೇರೆ ದೇಶಗಳಲ್ಲಿ ವಿವಿಧ ಉದ್ಯಮ ಕೈಗೊಂಡು ಬಹಳ ವರ್ಷ ಕೆಲಸ ಮಾಡಿದ್ದಾರೆ. ಜರ್ಮನಿ ಬಿಟ್ಟು ಆಗಲೇ 35 ವರ್ಷಗಳಾಗಿವೆ. ಹೀಗಾಗಿ ವಿವಿಧ ದೇಶಗಳೊಂದಿಗೆ ಇವರಿಗೆ ಹತ್ತಿರದ ಒಡನಾಟವಿದೆ.

'ಬೆಂಗಳೂರಿನಲ್ಲಿ ಜೀವನ ಚೆನ್ನಾಗಿದೆ. ಜನ ಸ್ನೇಹಪರರು. ಇಲ್ಲಿನ ತಂಪು ಹವಾಮಾನ, ಜೀವನಶೈಲಿ ಎರಡೂ ಚೆನ್ನಾಗಿದೆ. ಶ್ರೀಮಂತ, ಮಧ್ಯಮ ಮತ್ತು ಕೆಳವರ್ಗ ಈ ಮೂರೂ ಗುಂಪಿನ ಜನ ಇಲ್ಲಿದ್ದಾರೆ ಎಂಬುದನ್ನು ಗುರುತಿಸಿದ್ದೇನೆ. ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ. ಜನದಟ್ಟಣೆಯೂ ಹೆಚ್ಚು. ಟ್ರಾಫಿಕ್ ಅಂತೂ ಬಹಳ ಕಿರಿಕಿರಿ. ಆದರೆ ಉದ್ಯಮಕ್ಕೆ, ಉದ್ಯೋಗಕ್ಕೆ ಹೇಳಿ ಮಾಡಿಸಿದ ಜಾಗ ಇದು' ಎಂದು ಅವರು ಇಲ್ಲಿಯ ಬಗ್ಗೆ ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ.

ಹಾಗೆ ನೋಡಿದರೆ ಜರ್ಮನಿ ಅಭಿವೃದ್ಧಿ ಹೊಂದಿದ ದೇಶ. ಉದ್ಯೋಗಾವಕಾಶಗಳೂ ಅಲ್ಲಿ ಇದೆ. ಜನರ ಜೀವನಮಟ್ಟ ಇಲ್ಲಿಗೆ ಹೋಲಿಸಿದರೆ ಅತ್ಯಂತ ಎತ್ತರದ ಸ್ಥಾನದಲ್ಲಿದೆ. ಉತ್ಪನ್ನಗಳ ಆಮದು–ರಫ್ತು ಕ್ಷೇತ್ರದಲ್ಲಿ ಜರ್ಮನಿ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿರುವ ದೇಶ. ಆದರೆ ಹವಾಮಾನ ಇಲ್ಲಿಯಷ್ಟು ಚೆನ್ನಾಗಿಲ್ಲ. ಬೇಸಿಗೆಯಲ್ಲಿ ವಿಪರೀತ ಸೆಕೆ ಮತ್ತು ಚಳಿಗಾಲದಲ್ಲಿ ತಡೆಯಲು ಸಾಧ್ಯವಿಲ್ಲದಷ್ಟು ಚಳಿ. ಆದರೆ ಇಲ್ಲಿ ವರ್ಷದ ಮೂರು ಕಾಲಗಳಲ್ಲೂ ಸಹಿಸಲು ಅಸಾಧ್ಯವಾದ ಹವೆ ಇರುವುದಿಲ್ಲ. ಇದು ನಾನು ಭಾರತದಲ್ಲಿ ಭದ್ರವಾಗಿ ನೆಲೆ ನಿಲ್ಲಲು ಕಾರಣ' ಎನ್ನುತ್ತಾರೆ ರೊನ್ನಾ.

'ಇಲ್ಲಿನ ಸಂಸ್ಕೃತಿ, ಆಚರಣೆ, ಸಂಪ್ರದಾಯ ಚೆನ್ನಾಗಿದೆ. ಸ್ನೇಹಿತರನ್ನು ಕಂಡಾಗ ಹಾಯ್, ಹಲೋ ಹೇಳುವ ಸಂಪ್ರದಾಯ ಇದೆ. ಅದಕ್ಕಿಂತಲೂ ಹೆಚ್ಚಾಗಿ ಎರಡು ಕೈಗಳನ್ನು ಜೋಡಿಸಿ 'ನಮಸ್ತೆ' ಎಂದು ಹೇಳುವ ಸಂಪ್ರದಾಯ ಗೌರವ, ಪ್ರೀತಿಯನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಕೇಳಿ ತಿಳಿದುಕೊಂಡೆ. ಈ ಸಂಸ್ಕೃತಿ ಬಹಳ ಇಷ್ಟವಾಯಿತು ಮತ್ತು ಬೇರೆ ಯಾವ ದೇಶದಲ್ಲೂ ಈ ರೀತಿಯ ಸಂಪ್ರದಾಯವನ್ನು ನಾನು ಈ ಮೊದಲು ಕಂಡಿರಲಿಲ್ಲ' ಎಂದು ಅವರು ಸಂಸ್ಕೃತಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ.

'ನಾನು ಟ್ರಾವೆಲ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಸಹಜವಾಗಿಯೇ ಪ್ರವಾಸಿ ತಾಣಗಳ ಬಗ್ಗೆ ಕುತೂಹಲವಿತ್ತು, ನೋಡುವ ಕಾತರವಿತ್ತು. ಹೀಗಾಗಿ ಭಾರತದ ಬಹುತೇಕ ಎಲ್ಲ ಪ್ರವಾಸಿ ತಾಣಗಳನ್ನು ಖುದ್ದಾಗಿ ಹೋಗಿ ನೋಡಿ ಬಂದಿದ್ದೇನೆ. ಎಲ್ಲ ಪ್ರವಾಸಿ ತಾಣಗಳು ಬಹಳ ಚೆನ್ನಾಗಿವೆ. ಕರ್ನಾಟಕದಲ್ಲೂ ಬಹಳಷ್ಟು ಜಾಗಗಳನ್ನು ವೀಕ್ಷಿಸಿದ್ದೇನೆ. ಜೋಗ ಜಲಪಾತ ಅದ್ಭುತ. ಬೇಲೂರು, ಶೃಂಗೇರಿ ದೇವಾಲಯಗಳ ಶಿಲ್ಪಕಲೆ ಬಹಳ ಸೊಗಸಾಗಿದೆ' ಎನ್ನುತ್ತಾರೆ ರೊನ್ನಾ.

'ಇಷ್ಟು ವರ್ಷಗಳ ಕಾಲ ವಾರಾಂತ್ಯಗಳನ್ನು ಪ್ರವಾಸ, ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದರಲ್ಲೇ ಕಳೆಯುತ್ತಿದ್ದೆ. ಆದರೆ ಈಗ ವಾರಾಂತ್ಯವನ್ನು ಬರೀ ವಿಶ್ರಾಂತಿಗಷ್ಟೇ ಸೀಮಿತಗೊಳಿಸಿದ್ದೇನೆ. ಇಲ್ಲಿನ ಊಟ ತಿಂಡಿಗಳು ಬಹಳ ರುಚಿಕರ. ಎಲ್ಲ ರೀತಿಯ ಅಡುಗೆಗಳನ್ನೂ ರುಚಿ ನೋಡಿದ್ದೇನೆ. ಆದರೂ ನಾನು 'ಕಾಂಟಿನೆಂಟಲ್ ಫುಡ್'ಗೇ ಆದ್ಯತೆ ನೀಡುತ್ತೇನೆ. ಜರ್ಮನಿಯಲ್ಲಿ ಬ್ರೆಡ್ ಜತೆಗೆ ಹಂದಿ ಕರಿ ಮತ್ತು ಬೀಫ್ ಅನ್ನು ಬಹಳ ಜನ ಇಷ್ಟಪಟ್ಟು ತಿನ್ನುತ್ತಾರೆ. ಬ್ರೆಡ್ ರೋಲ್ ಜತೆಗೆ ಫ್ರೈಡ್ ಆಲೂ ಒಳ್ಳೆಯ ಕಾಂಬಿನೇಷನ್. ಇದನ್ನು ತಿನ್ನುವವರೂ ಹೆಚ್ಚು. ನೂಡಲ್ಸ್ ಜತೆಗೆ ಸ್ಪೈನಾಚ್, ಈರುಳ್ಳಿ ಸೇರಿಸಿ ತಿಂದರೆ ಸಖತ್ ರುಚಿ. ಬಿಸ್ಕೆಟ್ಸ್, ಬೇಕಿಂಗ್ ಐಟಮ್‌ಗಳೂ ಹೇರಳವಾಗಿ ಸಿಗುತ್ತವೆ ಎಂದು ಅಡುಗೆ, ಊಟ ತಿಂಡಿಗಳ ವಿಚಾರವನ್ನು ಹಂಚಿಕೊಳ್ಳುತ್ತಾರೆ.

ರೊನ್ನಾ ಅವರ ಪತಿ ಫಾರೂಕ್ ಅವರೂ ಎಕ್ಸ್‌ಪೋರ್ಟ್ ಬ್ಯುಸಿನೆಸ್ ನಡೆಸುತ್ತಾರೆ. ಮೂರು ಮಂದಿ ಹೆಣ್ಣು ಮಕ್ಕಳು. ಮಗಳು ಅನೀಷಾ ಜರ್ಮನಿಯಲ್ಲಿ ಓದಿ ಅಲ್ಲೇ ಉದ್ಯೋಗ ಹಿಡಿದು ಸದ್ಯ ಅಮೆರಿಕದಲ್ಲಿದ್ದಾಳೆ. ಎರಡನೆ ಮಗಳು ಸುರೈಯಾ ಚೆನ್ನೈಯಲ್ಲಿರುವ ಇವರದೇ ಟ್ರಾವೆಲ್ ಏಜೆನ್ಸಿಯಲ್ಲಿ ನಿರ್ದೇಶಕಿಯಾಗಿದ್ದಾಳೆ ಮತ್ತು ಕೊನೆಯ ಮಗಳು ರಿಬೆಕ್ಕಾ ಬೆಂಗಳೂರಿನಲ್ಲಿ ಪದವಿ ಓದಿ ಮುಗಿಸಿದ್ದು ಸದ್ಯ ಚೆನ್ನೈಯಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾಳೆ.

ರೊನ್ನಾ ಅವರು ಮನೆಯಲ್ಲಿ ಜರ್ಮನ್ ಭಾಷೆ ಮತ್ತು ಇಂಗ್ಲಿಷ್ ಮಾತನಾಡುತ್ತಾರಂತೆ. ಇಲ್ಲಿನ ಭಾಷೆ ಕೇಳಲು ಖುಷಿ ಕೊಡುತ್ತದೆಯಾದರೂ ಇವರಿಗೆ ಒಂದೇ ಒಂದು ಶಬ್ದ ಕೂಡ ಅರ್ಥ ಆಗುವುದಿಲ್ಲವಂತೆ. ಕನ್ನಡ ಕಲಿಯಬೇಕು ಎನ್ನುವ ಆಸೆ ಇದೆ. ಕೆಲಸದ ನಡುವೆ ಸ್ವಲ್ಪವೂ ಸಮಯ ಸಿಗದ ಕಾರಣ ಕನ್ನಡ ಕಲಿಯಲು ಆಗಲೇ ಇಲ್ಲ. ಇದಕ್ಕಾಗಿ ಇವರಿಗೆ ವಿಷಾದವೂ ಇದೆ.

★ ಅವನೀಶ್